# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 371 |
| ಸದಸ್ಯರ ಹೆಸರು | : | ಶ್ರೀ ಬಸವನಗೌಡ ಬಾದರ್ಲಿ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 19–08–2026 |
| ಉತ್ತರಿಸುವ ಸಚಿವರು | : | ಲೋಕೋಪಯೋಗಿ ಸಚಿವರು |

| ಕ್ರ ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ರಾಯಚೂರು ಜಿಲ್ಲೆಯ ಸಿಂಧನೂರು ನಗರದ ಕನಕದಾಸ ಸರ್ಕಲ್ (ಎನ್ ಹೆಚ್-150ಎ) ನಿಂದ ಕೆ.ನಾಗಪ್ಪ ಸರ್ಕಲ್, ಸುಕಲ್‌ಪೇಟೆವರೆಗಿನ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಸಂಬಂದಿಸಿದಂತೆ ಟೆಂಡರ್‌ನಲ್ಲಿ ಆಯ್ಕೆಗೊಂಡ ಗುತ್ತಿಗೆದಾರರು ನಕಲಿ ವರ್ಕಡನ್ ಪ್ರಮಾಣ ಪತ್ರವನ್ನು ನೀಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಸರ್ಕಾರದ ಗಮನಕ್ಕೆ ಬಂದಿರುತ್ತದೆ.<br>IMPROVEMENTS OF ROAD FROM KANAKA DAS CIRCLE (NH-150A) TO K NAGAPPA CIRCLE SUKALAPETE IN SINDHANUR TOWN SINDHANUR TALUKA DIST.RAICHUR UNDER CMIDP FOR THE YEAR 2025–26ರ ಕಾಮಗಾರಿಯ ಟೆಂಡರ್‌ನಲ್ಲಿ ಭಾಗಿಯಾದ ಬಿಡ್‌ದಾರರು ಸಲ್ಲಿಸಿರುವ ದಾಖಲೆಗಳನ್ನು ಪರಿಶೀಲನೆ ಮಾಡಿ, ಕಾಮಗಾರಿಗಳ ದೃಢಿಕರಣ ಪತ್ರದ ನೈಜತೆಯನ್ನು ಪರಿಶೀಲಿಸಿ ದೃಢೀಕರಿಸಲು ಕಾರ್ಯಪಾಲಕ ಇಂಜಿನಿಯರು, ಲೋಕೋಪಯೋಗಿ ಇಲಾಖೆ ವಿಭಾಗ, ರಾಯಚೂರು ರವರು ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ ವಿಭಾಗ, ಬಾಗಲಕೋಟೆ, ಇವರನ್ನು ಕೋರಿರುತ್ತಾರೆ. ಅದರಂತೆ ಪತ್ರದ ಸಂಖ್ಯೆ:1674, ದಿನಾಂಕ: 24.02.2026 ರಂದು ಕಾರ್ಯನಿರ್ವಾಹಕ ಅಭಿಯಂತರರವರ ಕಚೇರಿ, ಲೋಕೋಪಯೋಗಿ ಇಲಾಖೆ, ವಿಭಾಗ ಬಾಗಲಕೋಟೆ ಇವರು ಕಾಮಗಾರಿ ಪ್ರಮಾಣ ಪತ್ರದ ನೈಜತೆಯನ್ನು ದೃಡಿಕರಿಸಿ ಲೋಕೋಪಯೋಗಿ ಇಲಾಖೆ ವಿಭಾಗ, ರಾಯಚೂರು ಕಛೇರಿಗೆ ಸಲ್ಲಿಸಿರುತ್ತಾರೆ. ಅದರಂತೆ, ಸದರಿ ಕಾಮಗಾರಿಯ ತಾಂತ್ರಿಕ ಮತ್ತು ಆರ್ಥಿಕ ಬಿಡ್‌ಲ್ಲಿ ಅರ್ಹತೆ ಹೊಂದಿದ, ಎಲ್-1 ಬಿಡ್‌ದಾರರಿಗೆ ಎಲ್.ಓ.ಎ. ನೀಡಲಾಗಿರುತ್ತದೆ.<br><br>ಮುಂದುವರೆದು ಸದರಿ ಕಾಮಗಾರಿಯ ಪ್ರಮಾಣ ಪತ್ರದ ಕುರಿತು ಸಾರ್ವಜನಿಕರಿಂದ ದೂರುಗಳು ಬಂದಿರುವುದರಿಂದ ಕಾಮಗಾರಿ ಪ್ರಮಾಣ ಪತ್ರವನ್ನು ಮರು ದೃಡೀಕರಿಸಲು ಲೋಕೋಪಯೋಗಿ ಇಲಾಖೆ ವಿಭಾಗ ಕಛೇರಿಯಿಂದ ದಿನಾಂಕ: 10–04–2026 ರಂದು ಮತ್ತು ಅಧೀಕ್ಷಕ ಅಭಿಯಂತರರು ಲೋಕೋಪಯೋಗಿ ಇಲಾಖೆ ವೃತ್ತ ಬಳ್ಳಾರಿರವರು ಇ-ಮೇಲ್ ಮುಖಾಂತರ ಕೋರಲಾಗಿತ್ತು, ಅದರಂತೆ ಕಾರ್ಯನಿರ್ವಾಹಕ ಅಭಿಯಂತರರವರ ಕಚೇರಿ, ಲೋಕೊಪಯೋಗಿ ಇಲಾಖೆ ವಿಭಾಗ ಬಾಗಲಕೋಟೆರವರು ಕಾಮಗಾರಿಗೆ ಸಲ್ಲಿಸಿರುವ ಪ್ರಮಾಣ ಪತ್ರವು ನೈಜವಾಗಿರುವುದಿಲ್ಲವೆಂದು ಈ-ಮೇಲ್ ಮುಖಾಂತರ ಬಳ್ಳಾರಿ ವೃತ್ತ ಕಛೇರಿಗೆ ತಿಳಿಸಿರುತ್ತಾರೆ.<br><br>ಆದ್ದರಿಂದ ಸಂಬಂದಿಸಿದ ಗುತ್ತಿಗೆದಾರರ ಟೆಂಡರ್‌ನ್ನು PWD 'D' Code 262 (1) (a) KW-4 Section 31(1) ನಿಯಮಾವಳಿಗಳಂತೆ ಮುಖ್ಯ ಇಂಜನಿಯರರು ಸಂಪರ್ಕ ಮತ್ತು ಕಟ್ಟಡಗಳು (ಈ) ಕಲಬುರಗಿ ರವರು ಗುತ್ತಿಗೆ ಕರಾರನ್ನು ರದ್ದುಮಾಡಿ ಮರು ಟೆಂಡರ್ ಕರೆಯಲಾಗಿರುತ್ತದೆ.<br><br>ಮುಂದುವರೆದು, ಗುತ್ತಿಗೆದಾರರ F.S.D. ಮೊತ್ತವನ್ನು ಮುಟ್ಟುಗೋಲು ಹಾಕಿಕೊಂಡು ಗುತ್ತಿಗೆದಾರರ ಮೇಲೆ ಕ್ರಿಮಿನಲ್ ಮೊಕದ್ದಮೆ ಹೂಡಲು, ಗುತ್ತಿಗೆದಾರರನ್ನು ಕಪ್ಪು ಪಟ್ಟಿಗೆ ಸೇರಿಸಲು ಪರಿಶೀಲಿಸಲಾಗುತ್ತಿದೆ. |
| ಆ) | ಬಂದಿದ್ದಲ್ಲಿ, ಈ ಸಂಬಂಧ ಸರ್ಕಾರದ ಕೈಗೊಂಡಿರುವ ಕ್ರಮಗಳೇನು; | |

| | | |
|---|---|---|
| ಇ) | ಸದರಿ ಟೆಂಡರ್ ತಾಂತ್ರಿಕ ಹಾಗೂ ಆರ್ಥಿಕ ಬಿಡ್ ಸೇರಿದಂತೆ ಟೆಂಡರ್‌ನ ಎಲ್ಲಾ ದಾಖಲಾತಿಗಳನ್ನು ಕೂಲಂಕುಷವಾಗಿ ಪರಿಶೀಲಿಸುವ ಜವಾಬ್ದಾರಿ ಯಾರದ್ದಾಗಿರುತ್ತದೆ; | ಸದರಿ ಕಾಮಗಾರಿಗೆ ಸಂಬಂಧಿಸಿದಂತೆ E-Procurment ನಲ್ಲಿ ಗುತ್ತಿಗೆದಾರರು ಸಲ್ಲಿಸಿರುವ ಎಲ್ಲಾ ದಾಖಲೆಗಳನ್ನು Contractor Registration certificate, Annual Turnover, Work done certificates, Quantity wise workdones, Line of credit, ITR details, other document ಗಳನ್ನು ತೆರೆದು, ಕೂಲಂಕುಷವಾಗಿ ಪರಿಶೀಲಿಸಿ ಮತ್ತು ಅವುಗಳ ನೈಜತೆಯನ್ನು ಜಾರಿ ಮಾಡಿದ ಕಛೇರಿಗಳಿಂದ ಮರು ದೃಢಿಕರಿಸಿಕೊಳ್ಳುವ ಸಂಪೂರ್ಣ ಜವಬ್ದಾರಿ ಕಾರ್ಯಪಾಲಕ ಇಂಜನೀಯರು, ಲೋಕೋಪಯೋಗಿ ಇಲಾಖೆ, ವಿಭಾಗ, ರಾಯಚೂರು, ಇವರದ್ದಾಗಿರುತ್ತದೆ. ನಂತರ ತಾಂತ್ರಿಕ ಬಿಡ್‌ನ್ನು ಅನುಮೋದನೆಗಾಗಿ ವೃತ್ತ ಕಛೇರಿಯ ತಾಂತ್ರಿಕ ಬಿಡ್ ಪರಿಶೀಲನಾ ಸಮಿತಿಗೆ ಸಲ್ಲಿಸಿ ಅನುಮೋದನೆ ಪಡೆಯಬಹುದಾಗಿರುತ್ತದೆ. ಆರ್ಥಿಕ ಬಿಡ್‌ನ್ನು ವಿಭಾಗ ಕಚೇರಿಯಲ್ಲಿ ತೆರವುಗೊಳಿಸಿ ಪರಿಶೀಲಿಸಿ ತುಲನಾತ್ಮಕ ಪಟ್ಟಿಯನ್ನು ತಯಾರಿಸಿ ಅರ್ಹ ಗುತ್ತಿಗೆದಾರರ ಶಿಫಾರಸ್ಸಿನೊಂದಿಗೆ ವೃತ್ತ ಕಛೇರಿಯ ಮುಖಾಂತರ ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸಿ ಅನುಮೋದನೆ ಪಡೆಯಬಹುದಾಗಿದೆ. |
| ಈ) | ಈ ರೀತಿ ನಕಲಿ ದಾಖಲೆಗಳನ್ನು ಸಲ್ಲಿಸಿರುವ ಗುತ್ತಿಗೆದಾರರಿಗೆ ಟೆಂಡರ್ ನೀಡಲು ಮುಂದಾಗಿದ್ದ ಸಂಬಂಧಪಟ್ಟ ರಾಯಚೂರು ವಿಭಾಗದ ಲೋಕೋಪಯೋಗಿ ಇಲಾಖೆಯ ಕಾರ್ಯಪಾಲಕ ಅಭಿಯಂತತರ ವಿರುದ್ಧ ಅಗತ್ಯ ಕಾನೂನು ಕ್ರಮವಹಿಸುವ ಕುರಿತು ಸರ್ಕಾರ ಕೈಗೊಂಡಿರುವ ಕ್ರಮಗಳೇನು? | ನಕಲಿ ದಾಖಲೆಗಳನ್ನು ಸಲ್ಲಿಸಿರುವ ಗುತ್ತಿಗೆದಾರರಿಗೆ ಟೆಂಡರ್ ನೀಡಲು ಮುಂದಾಗಿದ್ದ ಸಂಬಂಧಪಟ್ಟ ರಾಯಚೂರು ವಿಭಾಗದ ಲೋಕೋಪಯೋಗಿ ಇಲಾಖೆಯ ಕಾರ್ಯಪಾಲಕ ಅಭಿಯಂತರ ವಿರುದ್ಧ ಕಾನೂನು ಕ್ರಮ ಜರುಗಿಸುವ ಕುರಿತು ಸರ್ಕಾರದಲ್ಲಿ ದಿನಾಂಕ:29.07.2026 ರಂದು ಪ್ರಸ್ತಾವನೆ ಸ್ವೀಕೃತವಾಗಿದ್ದು, ಸರ್ಕಾರದ ಪರಿಶೀಲನೆಯಲ್ಲಿದೆ. |

ಕಡತ ಸಂಖ್ಯೆ: ಲೋಇ 222 ಸಿಐಎಸ್ 2026 (ಇ)

(ಸತೀಶ ಜಾರಕಿಹೊಳಿ)
ಲೋಕೋಪಯೋಗಿ ಸಚಿವರು